18398

ಕುಂದಾಪುರ
21/10/16

ಪ್ರೀತಿಯ ಅಂಬಿಗೆ,

ನಿಮ್ಮ ಪಾದಕ್ಕೆ ವಂದನೆಗಳು.

ನಾನು ನನ್ನ ಮನೆಯವರು ಸೌಖ್ಯವಾಗಿದ್ದೇವೆ. ನೀವು ಮತ್ತು ನಿಮ್ಮ ಕುಟುಂಬದ ಸೌಖ್ಯವನ್ನು ಬಯಸುತ್ತೇನೆ.

ನಮಗೆ ಈಗ ಮೂರನೆ ವರ್ಷದ ತರಗತಿಗಳು ಆರಂಭಗೊಂಡಿವೆ. ಎರಡನೆಯ ವರ್ಷದ ಪರೀಕ್ಷೆಗಳು ಅಕ್ಟೋಬರ್ ಮೊದಲ ವಾರದಲ್ಲಿ ಮುಗಿದಿದ್ದವು. ಪ್ರಾಕ್ಟಿಕಲ್ ಪರೀಕ್ಷೆಯು ಈ ವಾರದಲ್ಲಿ ನಡೆಯುತ್ತಿದೆ.

ಕಳೆದ ವರ್ಷ ನಮಗೆ ಕಮ್ಯೂನಿಟಿ ಎಂಬ ಸಬ್ಜೆಕ್ಟ್ ಇತ್ತು. ಅದರಲ್ಲಿ ನಮಗೆ ಮನೆ ಮನೆಗೆ ಹೋಗಿ ರಕ್ತಪರೀಕ್ಷೆ ಮಾಡಲು ಮತ್ತು ರಕ್ತದೊತ್ತಡ ನೋಡಿ ಪರೀಕ್ಷೆ ಮಾಡಲು ಇರುತ್ತಿತ್ತು. ನಾವು ಗ್ರಾಮೀಣ ಪ್ರದೇಶಗಳಲ್ಲಿ ಮನೆಮನೆಗೆ ಹೋಗಿ ಇದನ್ನು ಮಾಡುತ್ತಿದ್ದೆವು. ಇದರಿಂದ ನಮಗೆ ಜನರ ಭಾಷೆ ಮತ್ತು ಅವರ ದೈನಂದಿನ ಬದುಕನ್ನು ನೋಡಲು ಸಿಕ್ಕಿತ್ತು. ನಾವು ಆರೋಗ್ಯ ಶಿಕ್ಷಣವನ್ನು ಕೂಡ ನೀಡಿದ್ದೆವು. 10 ಮಂದಿ ಗುಂಪು ಮಾಡಿ ಹೋಗುತ್ತಿದ್ದೆವು. ನಮ್ಮ ಜೊತೆ ಒಬ್ಬರು ಶಿಕ್ಷಕಿಯು ಬರುತ್ತಿದ್ದರು.

ನಂತರ ನಮಗೆ ಮೂರು ತಿಂಗಳು ಉಡುಪಿಯ Govt. ಆಸ್ಪತ್ರೆಯಲ್ಲಿ ಪೋಸ್ಟಿಂಗ್‌ಗೆ ಹಾಕಿದರು. ಅಲ್ಲಿ ನಮಗೆ ಅನೇಕ ವಿಷಯಗಳನ್ನು ಕಲಿಯಲು ಸಿಕ್ಕಿತು.

ಈ ವರ್ಷ ನಮಗೆ 4 ಸಬ್ಜೆಕ್ಟ್‌ಗಳಿವೆ. ಸೈಕ್ಯಾಟ್ರಿ, ಗೈನಾಕಾಲಜಿ ಮತ್ತು ಒಬ್ಸ್ಟೆಟ್ರಿಕ್ಸ್, ಪೀಡಿಯಾಟ್ರಿಕ್ಸ್, ಮೆಡಿಕಲ್ ಸರ್ಜಿಕಲ್ ನರ್ಸಿಂಗ್-III. ನಮಗೆ ಸೈಕ್ಯಾಟ್ರಿ ಪೋಸ್ಟಿಂಗ್ ಧಾರವಾಡ ಜಿಲ್ಲೆಯಲ್ಲಿ ಇರುತ್ತದೆ ಎಂದು ಹೇಳಿದ್ದಾರೆ. ಅಲ್ಲಿಯ ಜನರ ಭಾಷೆಯು ಬೇರೆ. ಅಲ್ಲಿ ನಮಗೆ ಏಪ್ರಿಲ್ ಅಥವಾ ಮೇ ನಲ್ಲಿ ಹೋಗಲು ಇದೆ.

ಈ ವಾರ ನಮಗೆ ಪ್ರಾಕ್ಟಿಕಲ್ ಜಾಸ್ತಿ ಇರುತ್ತದೆ. ಥಿಯರಿಗೆ ಸ್ವಲ್ಪ ಸಮಯ ಕಡಿಮೆಯಾಗುತ್ತದೆ. ಶಿಕ್ಷಕರು ಈ ವಾರ ಚೆನ್ನಾಗಿ ಕಲಿಸುತ್ತಾರೆ. ನಮ್ಮ ಕಾಲೇಜಿನ ಪ್ರಿನ್ಸಿಪಾಲ್ ಕೂಡ ಬದಲಾಗಿದ್ದಾರೆ. ಹೊಸ ಪ್ರಿನ್ಸಿಪಾಲರು ತುಂಬಾ ಸ್ಟ್ರಿಕ್ಟ್ ಇದ್ದಾರೆ. ನಮಗೆ ತರಗತಿಗಳು ಬೆಳಗ್ಗೆ 9 ರಿಂದ 5 ರ ತನಕ ನಡೆಯುತ್ತಿವೆ.

ನಾನು ಈಗ ಮನೆಯಿಂದಲೇ ಕಾಲೇಜಿಗೆ ಹೋಗುತ್ತಿದ್ದೇನೆ.


ಕೊನೆಯ ವರ್ಷದ ವಿದ್ಯಾರ್ಥಿಗಳಿಗೆ ಫೇರ್‌ವೆಲ್ ಕಾರ್ಯಕ್ರಮವು ಅಕ್ಟೋಬರ್ 1 ರಂದು ಇತ್ತು. ಅವರಿಗೆ ಕಾರ್ಯಕ್ರಮಗಳನ್ನು ಮತ್ತು ಮನರಂಜನೆ ಆಟಗಳನ್ನು ಹಮ್ಮಿಕೊಳ್ಳಲಾಗಿತ್ತು. ಮತ್ತು ಅವರಿಗೆ ಶುಭಹಾರೈಸಲಾಗಿತ್ತು.

ನಮ್ಮ ಕಾಲೇಜಿನಲ್ಲಿ 4ನೇ ವರ್ಷದ ಬಿಎಸ್ಸಿ ನರ್ಸಿಂಗ್ ವಿದ್ಯಾರ್ಥಿಗಳಿಗೆ ಕ್ಯಾಂಪಸ್ ಸೆಲೆಕ್ಷನ್ ಮೂಲಕ ದೆಹಲಿಯ ಅಪೋಲೋ ಆಸ್ಪತ್ರೆ ಮತ್ತು ಮಂಗಳೂರಿನ ಎ.ಜೆ ಆಸ್ಪತ್ರೆಯಲ್ಲಿ ಕೆಲಸಕ್ಕೆ ಆಯ್ಕೆ ಮಾಡಿದ್ದಾರೆ. ಇದು ಪ್ರತಿ ವರ್ಷವೂ ನಡೆಯುತ್ತದೆ.

ಮುಂದಿನ ಡಿಸೆಂಬರ್ ತಿಂಗಳಲ್ಲಿ ನಮಗೆ 15 ದಿನದ್ದು ರಜೆಯಿದೆ. ಕ್ರಿಸ್ಮಸ್ ಹಬ್ಬ ಆಚರಿಸಲು ರಜೆ ಕೊಡುತ್ತಿದ್ದಾರೆ.

ನಿಮ್ಮ ಉಪಕಾರಕ್ಕೆ ಕೃತಜ್ಞತೆ ಸಲ್ಲಿಸುತ್ತೇನೆ. ನಿಮಗೂ ನಿಮ್ಮ ಕುಟುಂಬದವರಿಗೂ ಈ ಕ್ರಿಸ್ಮಸ್ ಮತ್ತು ಹೊಸ ವರ್ಷದ ಶುಭಾಶಯಗಳನ್ನು ಸಲ್ಲಿಸುತ್ತೇನೆ. ಹೊಸವರ್ಷವು ನಿಮಗೆ ಆರೋಗ್ಯ, ಸಂತೃಪ್ತಿ ತರಲಿ ಎಂದು ಬಯಸುತ್ತಾ ನನ್ನ ಈ ಚಿಕ್ಕ ಪತ್ರವನ್ನು ಮುಗಿಸುತ್ತೇನೆ.

ಇತಿ, ನಿಮ್ಮ ಪ್ರೀತಿಯ,
ವಿಲ್ಮಾ ಡಿ'ಸೋಜ.



Merry Christmas
&
Happy New Year Dear Aunty.